



# ಗಜಲ್

ಮರಕೆ ಕೊಡಲಿಯ ಬಿರುಸಾದ ಕಾವೇ ಮೂಲವಾಯಿತು ಯಾರ ಶಾಪವಿದು ನೋಡು
ಮದವೇರಿದ ಗಜಗಳ ತುಳಿತಕೆ ಬಳ್ಳಿನಲುಗಿತು ಯಾವ ಪಾಪವಿದು ನೋಡು

ಮಡುಗಟ್ಟಿದ ಬಿಸಿ ನೆತ್ತರಲಿ ಜೀವ ಬಿದ್ದು ಒದ್ದಾಡುತ ನರಳುತಿದೆ
ಬಲಿತ ನಾಯಿಗಳು ಕಚ್ಚಿ ಕಚ್ಚಿ ಹಿಗ್ಗುತ ನೆಕ್ಕುತಿವೆ ಸಹಿಸದ ನೋವಿದು ನೋಡು

ಗಲ್ಲಿ ಗಲ್ಲಿ ಸುತ್ತಿ ತಿಂದು ತೇಗುತ ಸೊಕ್ಕಿದ ಬೆದೆಗೆ ಬಂದ ಗೂಳಿಗಳು
ಮುಗ್ಧ ಹಸುಗಳ ಹೆಬ್ಬುತ ಪ್ರಾಣಹಿಂಡುತಾ ಮಾಡಿದ ಗಾಯವಿದು ನೋಡು

ಹಿಂಡನಗಲಿ ಮೈಮರೆತು ಸಾಗಿದ ಚೆಲುವ ಜಿಂಕೆಯು ಮರುಳಾಯಿತು ಮಾತಿಗೆ
ಗೋಮುಖ ವ್ಯಾಘ್ರಗಳ ಮೋಸದ ಜಾಲದಲಿ ದಹಿಸಿದ ಜೀವವಿದು ನೋಡು

ಮಹಿಷಾಸುರ ಮರ್ದಿನಿಯಾಗಿ ಜಗದಲಿ ಮತ್ತೆ ನೀ ಅವತರಿಸಿ ಬಾ
ದುಷ್ಟ ರಕ್ಕಸರ ರುಂಡ ಚಂಡಾಡಲು 'ಪ್ರಭೆ'ಯು ಪಡೆಯುವ ಅಷ್ಟ ಶಕ್ತಿಯಿದು ನೋಡು

**● ಪ್ರಭಾವತಿ ಎಸ್. ದೇಸಾಯಿ**

ಕಲೆ: ಡಿ.ಕೆ. ರಮೇಶ್